■ ಹನಿ

## ಬಾಲಿವುಡ್‌ಗೆ ಮಾಜಿದಿ

ಮಾಜಿದ್ ಮಾಜಿದಿ ಎಂಬ ಹೆಸರು ಕೇಳಿದಾಕ್ಷಣ ಚಿತ್ರಪ್ರಿಯರ ಕಣ್ಣರಳುತ್ತದೆ. ಅಂತರರಾಷ್ಟ್ರೀಯ ಚಿತ್ರೋತ್ಸವದ ಅತ್ಯಂತ ಪರಿಚಿತ ಹೆಸರು ಈ ಮಾಜಿದಿ. ಇರಾನ್‌ನ ಈ ಚಿತ್ರ ನಿರ್ದೇಶಕ, ನಿರ್ಮಾಪಕ ಮತ್ತು ಚಿತ್ರಕಥೆಗಾರ ಈಗ ಭಾರತದತ್ತ ಕಣ್ಣು ಹಾಯಿಸಿದ್ದಾರೆ ಎನ್ನುವುದೇ ದೊಡ್ಡ ಸುದ್ದಿ. 'ಫ್ಲೋಟಿಂಗ್ ಗಾರ್ಡನ್ಸ್' ಎನ್ನುವ ಈತ ನಿರ್ದೇಶಿಸಲಿರುವ ಹೊಸ ಚಿತ್ರ ಹಿಂದಿ ಮತ್ತು ಇಂಗ್ಲಿಷ್‌ನಲ್ಲಿ ಒಟ್ಟಿಗೇ ನಿರ್ಮಾಣವಾಗಲಿದೆ. ಈತನಿಂದ ಒಂದು ಸಿನಿಮಾ ನಿರ್ದೇಶಿಸಬೇಕೆಂದು ಕಳೆದ ಎರಡು ವರ್ಷಗಳಿಂದ ಪ್ರಯತ್ನ ನಡೆಸುತ್ತಿದ್ದ 'ಐ ಕ್ಯಾಂಡಿ ಫಿಲಂಸ್' ಸಂಸ್ಥೆಯವರು ಈಗ ಯಶಸ್ವಿಯಾಗಿದ್ದಾರೆ. 'ಕಾಯ್ ಪೋ ಚೆ' ಎನ್ನುವ ಚಿತ್ರದಲ್ಲಿ ನಟಿಸಿ ಗಮನ ಸೆಳೆದ ಸುಶಾಂತ್‌ಸಿಂಗ್ ರಜಪೂತ್ ಈ ಚಿತ್ರದ ನಾಯಕ ಎನ್ನುವ ಸುದ್ದಿ ಈಗಾಗಲೆ ಹಬ್ಬಿದೆ. ಅಕ್ಟೋಬರ್‌ನಲ್ಲಿ ಭಾರತಕ್ಕೆ ಬರಲಿರುವ ಮಾಜಿದಿ, ಇಲ್ಲೇ ನಟ–ನಟಿಯರನ್ನು ಆಯ್ಕೆ ಮಾಡಲಿದ್ದಾರೆ. ಶಿಮ್ಲಾ, ನೈನಿತಾಲ್‌ನಲ್ಲಿ ಶೂಟಿಂಗ್ ನಡೆಯುವುದು ಖಚಿತವಾಗಿದೆ. 2014ರ ಆರಂಭದಲ್ಲಿ ಚಿತ್ರೀಕರಣ ಆರಂಭವಾಗಬಹುದು.

1998ರಲ್ಲಿ ಬಂದ 'ಚಿಲ್ಡ್ರನ್ ಆಫ್ ಹೆವನ್' ಎನ್ನುವ ಚಿತ್ರ ನೋಡಿದವರು ಮಾಜಿದಿಯ ಶೈಲಿಯನ್ನು ಯಾವತ್ತೂ ಮರೆಯಲಿಕ್ಕಿಲ್ಲ. ಮನುಷ್ಯ ಸಂಬಂಧದ ಬಗ್ಗೆ, ಅದರಲ್ಲೂ ಅಪ್ಪ–ಮಕ್ಕಳ ಸಂಬಂಧದ ಬಗ್ಗೆ ಮಾಜಿದಿಯಷ್ಟು ನವಿರಾಗಿ ಚಿತ್ರ ಮಾಡುವವರು ಕಡಿಮೆಯೇ. ಈ ಚಿತ್ರ ವಿದೇಶಿ ವಿಭಾಗದಲ್ಲಿ ಆಸ್ಕರ್ ಪ್ರಶಸ್ತಿಗೆ ನಾಮಕರಣಗೊಂಡ ಇರಾನ್‌ನ ಮೊತ್ತ ಮೊದಲ ಚಿತ್ರ. ಆ ವರ್ಷ ಆಸ್ಕರ್‌ನಲ್ಲಿ ಇಟಲಿಯ ರಾಬರ್ಟೊ ಬೆನಿಗ್ನಿಯ 'ಲೈಫ್ ಈಸ್ ಬ್ಯೂಟಿಫುಲ್' ಪ್ರಶಸ್ತಿ ಗೆದ್ದುಕೊಂಡಿತಾದರೂ, ಮಾಜಿದಿಯ ಚಿತ್ರ ಆ ಬಳಿಕ ಹಲವು ಅಂತರರಾಷ್ಟ್ರೀಯ ಚಿತ್ರೋತ್ಸವಗಳಲ್ಲಿ ಪ್ರಶಸ್ತಿ ಗೆದ್ದುಕೊಂಡಿತು. ದಿ ಕಲರ್ ಆಫ್ ಪ್ಯಾರಡೈಸ್, ಬರಾನ್, ದಿ ವಿಲ್ಲೋ ಟ್ರೀ, ದಿ ಸಾಂಗ್ ಆಫ್ ಸ್ಪಾರೋಸ್– ಹೀಗೆ ಮಾಜಿದಿಯ ಚಿತ್ರಗಳೆಂದರೆ ಸಹೃದಯ ಪ್ರೇಕ್ಷಕರು ಮುಗಿಬಿದ್ದು ನೋಡುತ್ತಾರೆ. ಭಾರತದಲ್ಲೂ ಮಾಜಿದಿಗೆ ದೊಡ್ಡ ಅಭಿಮಾನಿಗಳ ದಂಡೇ ಇದೆ.

14ರ ಹರೆಯದಲ್ಲಿ ಹವ್ಯಾಸಿ ರಂಗಭೂಮಿಯ ನಟನಾಗಿದ್ದ ಮಾಜಿದಿ, ಬಳಿಕ 1985ರಲ್ಲಿ 'ಬಾಯ್ಕಾಟ್' ಎನ್ನುವ ಚಿತ್ರದಲ್ಲಿ ಹೀರೋ ಆಗಿದ್ದ. ಅಲ್ಲಿಂದ ನಿರ್ಮಾಣ ಮತ್ತು ನಿರ್ದೇಶನದತ್ತ ಚಿತ್ತ ಹರಿಯಿತು. 2008ರ ಬೇಸಿಗೆ ಒಲಿಂಪಿಕ್ಸ್ ಬಗ್ಗೆ ಸಾಕ್ಷ್ಯಚಿತ್ರ ನಿರ್ಮಿಸಲು ಚೀನಾ ಆಹ್ವಾನ ಮಾಡಿದ ಐವರು ವಿಶ್ವಶ್ರೇಷ್ಠ ನಿರ್ದೇಶಕರಲ್ಲಿ ಮಾಜಿದಿಯೂ ಒಬ್ಬರು. ಡ್ಯಾನಿಶ್ ಫಿಲಂ ಫೆಸ್ಟಿವಲ್‌ಗೆ ಬಹಿಷ್ಕಾರ ಹಾಕಿ ಸುದ್ದಿಯಾಗಿದ್ದ ಮಾಜಿದಿ, ಭಾರತದಲ್ಲಿ ಚಿತ್ರೀಕರಿಸಲಿರುವ ಸಿನಿಮಾದ ಬಗ್ಗೆ ಈಗಾಗಲೆ ಕುತೂಹಲ ಗರಿಕೆದರಿದೆ.







## ಸೀಮಾ ಗೆದ್ದ ಚಿನ್ನ

ಏಷ್ಯನ್ ಗೇಮ್ಸ್‌ನಲ್ಲಿ ಮೊನ್ನೆ ಡಿಸ್ಕಸ್ ಥ್ರೋ ನಲ್ಲಿ ಚಿನ್ನದ ಪದಕ ಗೆದ್ದ ಸೀಮಾ ಪುನಿಯಾ, ಡಯಾಸ್‌ಗೆ ಹತ್ತಿದಾಗ ಸ್ಟೇಡಿಯಂನಲ್ಲ ಇದ್ದದ್ದು ಕೈಬೆರಳೆಣಿಕೆಯ ಪ್ರೇಕ್ಷಕರು. ಆದರೆ ರಾಷ್ಟ್ರಧ್ವಜವನ್ನು ಹಿಡಿದು ನಿಂತ ಸೀಮಾ ಪುನಿಯಾಗೆ ಕಣ್ಣೀರು ತಡೆದುಕೊಳ್ಳಲಾಗಲಿಲ್ಲ. ಕಳೆದ ಆರೇಳು ವರ್ಷಗಳಲ್ಲಿ ಈಕೆ ಅನುಭವಿಸಿದ್ದ ಅವಮಾನವೆಲ್ಲ ಈ ಕಣ್ಣೀರಿನಲ್ಲಿ ತೊಳೆದುಕೊಂಡು ಹೋಯಿತೋ ಎಂಬಂತೆ ಕಂಡುಬಂದದ್ದು ಸುಳ್ಳಲ್ಲ.

14 ವರ್ಷಗಳ ಹಿಂದೆ 2000ದಲ್ಲಿ ಚಿಲಿಯ ಸ್ಯಾಂಟಿಯಾಗೋದಲ್ಲಿ ನಡೆದ ವಿಶ್ವ ಜ್ಯೂನಿಯರ್ ಚಾಂಪಿಯನ್‌ಶಿಪ್‌ನ ಡಿಸ್ಕಸ್ ಥ್ರೋನಲ್ಲಿ ಈಕೆ ಚಿನ್ನ ಗೆದ್ದಾಗ ಸಂತಸದ ಅಲೆಯೇ ಎದ್ದಿತ್ತು. ಬಳಿಕ ಈಕೆಯ ಡೋಪಿಂಗ್ ಟೆಸ್ಟ್‌ನಲ್ಲಿ ಸಂಶಯಕ್ಕೆ ಕಾರಣವಾದ ಔಷಧದ ಸುಳಿವು ಸಿಕ್ಕು ಚಿನ್ನವನ್ನು ಕಿತ್ತುಕೊಂಡರು. ಪ್ರಯಾಣದ ವೇಳೆ ಈಕೆ ನೆಗಡಿಗೆ ಮಾತ್ರೆ ತೆಗೆದುಕೊಂಡದ್ದೇ ಅನಾಹುತ ಸೃಷ್ಟಿಸಿತ್ತು. ಭಾರತೀಯ ಅಥ್ಲೆಟಿಕ್ ಫೆಡರೇಶನ್ನಿನ ತನಿಖೆಯ ಬಳಿಕ ಸತ್ಯ ಗೊತ್ತಾಗಿ ಈಕೆ ಅಮಾನತು ಶಿಕ್ಷೆಯಿಂದ ಬಚಾವಾದಳು. 2 ವರ್ಷದ ಬಳಿಕ ಅದೇ ಕೂಟದಲ್ಲಿ ಮತ್ತೆ ಕಂಚು ಗೆದ್ದರೂ ಸಾಧನೆಯ ಅಂತರ ಕಡಿಮೆಯಾಗಿತ್ತು. ದೆಹಲಿಯ ಕಾಮನ್‌ವೆಲ್ತ್ ಗೇಮ್ಸ್ ನಲ್ಲಿ ಚಿನ್ನ ಗೆದ್ದಾಕೆ, ಮತ್ತೆ 2006ರ ದೋಹಾ ಕಾಮನ್‌ವೆಲ್ತ್‌ನಲ್ಲಿ ವಿವಾದಕ್ಕೆ ಒಳಗಾದಳು. ಕೊನೇ ಕ್ಷಣದಲ್ಲಿ ಈಕೆಯನ್ನು ತಂಡದಿಂದ ಕೈಬಿಟ್ಟದ್ದಕ್ಕೆ ತರಬೇತಿ ಶಿಬಿರದಲ್ಲಿ ಈಕೆಯ ಡೋಪಿಂಗ್ ಟೆಸ್ಟ್ ಪಾಸಿಟಿವ್ ಬಂದದ್ದೇ ಕಾರಣ ಎಂಬ ಸುದ್ದಿ ಹಬ್ಬಿತ್ತು. ಆದರೆ ಅಧಿಕಾರಿಗಳೇ ಬಳಿಕ ಸಂಶಯ ದೂರ ಮಾಡಿ ಕ್ಲೀನ್ ಚಿಟ್ ನೀಡಿದರೂ, ಈಕೆ ಕೂಟದಲ್ಲಿ ಪಾಲ್ಗೊಳ್ಳಲಿಲ್ಲ. ಈ ಮಧ್ಯೆ ಬೆನ್ನುನೋವು ಇನ್ನಿಲ್ಲದಂತೆ ಕಾಡಿ, ಒಂದೆರಡು ಕೂಟಗಳಲ್ಲಿ ಭಾಗವಹಿಸಲೂ ಆಗಲಿಲ್ಲ.

ದೆಹಲಿ ಏಷ್ಯನ್ ಗೇಮ್ಸ್‌ನಲ್ಲಿ ಬೆಳ್ಳಿ ಗೆದ್ದ ಬಳಿಕ ಅಮೆರಿಕಕ್ಕೆ ತೆರಳಿ ಕಠಿಣ ತರಬೇತಿ ಪಡೆದದ್ದು ಈಗ ಉಪಯೋಗಕ್ಕೆ ಬಂದಿದೆ. ಈಕೆಯ ಕೋಚ್ ಆಗಿದ್ದು ಬಳಿಕ ಮದುವೆಯಾದ ಆಯುಶ್ ಪುನಿಯಾ ಕೂಡಾ ಡಿಸ್ಕಸ್ ಥ್ರೋನಲ್ಲಿ ಹಿಂದೆ ರಾಷ್ಟ್ರೀಯ ಕೂಟ ದಾಖಲೆ ಸ್ಥಾಪಿಸಿದವರು. ಗಂಡನ ಬೆಂಬಲ ಈಕೆಗೆ ಅವಮಾನದಿಂದ ಹೊರಬರಲು ಸಾಕಷ್ಟು ಸಹಾಯ ಮಾಡಿದೆ. ■

Printed and Published by S.V. Srinivasan on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65